# ಅಂಗಾಂಗ ದಾನದಿಂದ ಜೀವದಾನ




**ಬೆಂಗಳೂರು, ಮೇ 19-** ಅಂಗಾಂಗ ದಾನ ಮಾಡುವ ಮೂಲಕ ಅಮೂಲ್ಯ ಜೀವ ಉಳಿಸಬಹುದೆಂದು ಕ್ಯಾನ್ಸರ್ ತಜ್ಞ ಡಾ.ಸುನಿಲ್‌ಭಟ್ ಹೇಳಿದರು.

2016ರ ಮೇ ತಿಂಗಳಲ್ಲಿ ಥಾಲಸೇಮಿಯ ರೋಗದಿಂದ ಬಳಲುತ್ತಿದ್ದ ಬಾಲಕನಿಗೆ ನಗರದಲ್ಲಿ ರಕ್ತ ಸ್ಟೆಮ್ ಜೀವ ಕೋಶಗಳನ್ನು 28ವರ್ಷದ ವ್ಯಕ್ತಿಯೊಬ್ಬರಿಂದ ದಾನ ಪಡೆದು ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಲಾಗಿದ್ದು, ಈ ಬಾಲಕ ಈಗ ಸಂಪೂರ್ಣ ಗುಣಮುಖನಾಗಿದ್ದಾನೆ ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

ನಗರದ ಪ್ರೆಸ್‌ಕ್ಲಬ್‌ನಲ್ಲಿ ದಾನ ಪಡೆದಿದ್ದ ಪಂಜಾಬ್‌ನ ಅಮೃತ್‌ಸರದ 6 ವರ್ಷದ ಬಾಲಕ ಫತೇಸಿಂಗ್ ಹಾಗೂ ಆತನ ತಂದೆ-ತಾಯಿ, ಮಗುವಿಗೆ ರಕ್ತಸ್ಟೆಮ್ ದಾನ ನೀಡಿದ 28 ವರ್ಷದ ನವಲ್‌ಚೌಧರಿ ಕೂಡಾ ಸುದ್ದಿಗೋಷ್ಠಿಯಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಫತೇಸಿಂಗ್‌ಗೆ ಒಂದೂವರೆ ವರ್ಷ ಇದಾಗ ಥಾಲಸೇಮಿಯ ಇದೆ ಎಂಬುದು ಗೊತ್ತಾಗಿದೆ. ಮೊದಲ ಬಾರಿ ರಕ್ತ ನೀಡಿದಾಗ ಅವನ ದೇಹ ಪ್ರತಿಕಾಯಗಳನ್ನು ಉತ್ಪಾದಿಸಲು ಅಸಮರ್ಥವಾಗಿತ್ತು. ಹಾಗಾಗಿ ಅವನಿಗೆ ರಕ್ತ ವರ್ಗಾವಣೆ ಮಾಡಲು ಸಾಧ್ಯವಾಗಿರಲಿಲ್ಲ, ಅಲ್ಲದೆ, ಅತ್ಯಗತ್ಯವಾಗಿ ರಕ್ತ ಸ್ಟೆಮ್ ಜೀವಕೋಶದ ಕಸಿಯ ಅಗತ್ಯ ಉಂಟಾಗಿತ್ತು.

ಬೆಂಗಳೂರಿನ ದಾತ್ರಿ, ಫೌಂಡೇಶನ್ ಮೂಲಕ ಫತೆಸಿಂಗ್ ಪೋಷಕರು ಹೆಸರು ನೋಂದಾಯಿಸಿಕೊಂಡು ದಾನಿಗಳಿಗೆ ಹುಡುಕಾಟ ನಡೆಸಿದ್ದರು.

ಬೆಂಗಳೂರಿನಲ್ಲೇ ನೆಲೆಸಿರುವ ಪಂಜಾಬ್‌ನ 28 ವರ್ಷದ ನವಲ್‌ಚೌದರಿಯು ಮೂಳೆ ಮಜ್ಜು ದಾನ ಮಾಡಲು ಮುಂದಾದರು. 2016ರ ಮೇನಲ್ಲಿ ಮಜುಂದಾರ್ ಶಾ ಕ್ಯಾನ್ಸರ್ ಕೇಂದ್ರದ ಪೀಡಿಯಾಟ್ರಿಕ್ ಹೆಮಾಟೊ-ಆಂಕಾಲಜಿಸ್ಟ್ ಡಾ.ಸುನಿಲ್‌ಭಟ್ ಮತ್ತು ತಂಡ ಫತೆಸಿಂಗ್‌ಗೆ ರಕ್ತದಷ್ಟೇ ಜೀವಕೋಶದ ಕಸಿ ಮಾಡಿ ಯಶಸ್ವಿಯಾಗಿದ್ದಾರೆ.

ಈಗ ಬಾಲಕ ಸಂಪೂರ್ಣವಾಗಿ ಆರೋಗ್ಯವಾಗಿದ್ದಾನೆ ಎಂದು ಪೋಷಕರು ಸುದ್ದಿಗೋಷ್ಠಿಯಲ್ಲಿ ಸಂತಸ ಹಂಚಿಕೊಂಡರು. ಅಂಗಾಂಗಗಳ ಅವಶ್ಯಕತೆ ಇದ್ದವರು ವೆಬ್‌ಸೈಟ್ www.datri.org ಸಂಪರ್ಕಿಸಬಹುದು.

ಈ ಸಂಜೆ
Fri, 19 May 2017
epaper.eesanje.com//c/19169477